# PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE 12/3/2020

## ಅನುದಾನ ಬಿಡುಗಡೆಗೆ ಜಿಲ್ಲಾವಾರು ಸಮಿತಿ ರಚನೆ



**ವಿಧಾನ ಪರಿಷತ್:** ವಿಚೇತನರು, ಎಚ್ಐವಿ ಸೋಂಕಿತರು, ದೇವದಾಸಿಗಳು, ತೃತೀಯ ಲಿಂಗಿಗಳು, ಅಲೆಮಾರಿ ಸೇರಿದಂತೆ ಪ್ರಮುಖರಿಗೆ ದೇವರಾಜು ಅರಸು ವಸತಿ ಯೋಜನೆಯಲ್ಲಿ ಅನುದಾನ ಬಿಡುಗಡೆಗೆ ಜಿಲ್ಲಾವಾರು ಸಮಿತಿ ರಚನೆ ಮಾಡಲಾಗಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು. ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡರ ಪ್ರಶ್ನೆಗೆ ಉತ್ತರಿಸಿದ ಅವರು, ವಿಶೇಷ ವರ್ಗದ ಜನರಿಗೆ ಯಾವುದೇ ರೀತಿಯ ಸೌಲಭ್ಯ ಒದಗಿಸದೆ, ಆತ್ಮವಂಚನೆ ಮಾಡಲ್ಲ, ಆದ್ಯತೆ ಮೇರೆಗೆ ತುರ್ತು ಹಣ ಬಿಡುಗಡೆ ಮಾಡುವಂತೆ ಈಗಾಗಲೇ ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಕಳೆದ 5 ವರ್ಷಗಳಲ್ಲಿ ಒಟ್ಟು 68,115 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಈ ಪೈಕಿ 41,207 ಮನೆಗಳು ಪೂರ್ಣಗೊಂಡಿವೆ. 6,020 ಮನೆಗಳು ತಳಪಾಯ ಹಂತದಲ್ಲಿ 3,744 ಮನೆಗಳು ಗೋಡೆ ಹಂತದಲ್ಲಿ, 4,206 ಮನೆಗಳು ಛಾವಣಿ ಹಂತದಲ್ಲಿವೆ. ಉಳಿದಂತೆ 1975 ಫಲಾನುಭವಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿತ್ತು. ಆದರೆ, ಮನೆಗಳನ್ನು ಪ್ರಾರಂಭಿಸಲಾಗದ ಹಿನ್ನೆಲೆಯಲ್ಲಿ ಹಿಂಪಡೆಯಲಾಗಿದೆ ಎಂದರು.

---

## ಜನರಲ್ ಕ್ಯಾಟಗರಿಯಲ್ಲಿ ಯಾರು ಉಳಿಯುತ್ತಾರೆ?



**ವಿಧಾನ ಪರಿಷತ್:** ಎಸ್‌ಸಿ, ಎಸ್‌ಟಿಗಳಿಗೆ ತಮ್ಮ ಸಮುದಾಯ ಸೇರಿಸುವಂತೆ ಅನೇಕರು ಬೇಡಿಕೆ ಇಡುತ್ತಾರೆ. ಈ ಪ್ರಕ್ರಿಯೆ ಹೀಗೆ ಮುಂದುವರಿದರೆ ಭವಿಷ್ಯದಲ್ಲಿ ಜನರಲ್ ಕ್ಯಾಟಗರಿಯಲ್ಲಿ ಯಾರು ಉಳಿಯುದಿಲ್ಲ ಎಂದು ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಬೇಸರ ವ್ಯಕ್ತಪಡಿಸಿದರು. ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ವೀಣಾ ಅಚ್ಚಯ್ಯ ಅವರು ಕೇಳಿರುವ ಕೊಡವ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತ ಪ್ರಶ್ನೆಗೆ ಸಚಿವರು ಉತ್ತರಿಸಿ, ಎಲ್ಲರೂ ನಮ್ಮನ್ನು ಎಸ್‌ಸಿ/ಎಸ್‌ಟಿಗೆ ಸೇರಿಸಿ ಎಂದು ಪಟ್ಟುಹಿಡುತ್ತಾರೆ. ಆದರೆ, ಹೀಗೆ ಮಾಡಿದರೆ ಜನರಲ್ ಕ್ಯಾಟಗರಿಯಲ್ಲಿ ಜನಾನೇ ಉಳಿಯುವುದಿಲ್ಲ. ಅಲ್ಲದೆ, ಎಸ್‌ಸಿಗೆ ಸೇರಿಸುವ ಮಾನದಂಡವೇ ಅಸ್ಪೃಶ್ಯತೆ ಆಗಿದೆ. ಹೀಗಾಗಿಯೇ, ಕೊಡವ ಸಮುದಾಯಕ್ಕೆ ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬೇಡಿಕೆಗೆ ಉತ್ತರಿಸುವುದಿಲ್ಲ ಎಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಕಾಂಗ್ರೆಸ್ ಸದಸ್ಯ ಪ್ರಕಾಶ ರಾಥೋಡ್, ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಲ್ಲಿ ಅಸ್ಪೃಶ್ಯತೆ ಮಾನದಂಡ ಎಂದು ಉಲ್ಲೇಖಿಸಿಲ್ಲ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ನಾನು ತಂದು ತೋರಿಸುತ್ತೇನೆ ಎಂದರು.